**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 500/2021</u>**

ದಿನಾಂಕಃ**. 26.03.2026** ರಂದು ಸಾಕ್ಷಿಗೆ ಮದ್ಯಾಹ್ನ **12.05** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**1** | ಪ್ರಾಸಾ-**1** |
|---|---|
| ಹೆಸರು | - ಶ್ರೀಮತಿ ಜಯಶ್ರೀ |
| ಗಂಡನ ಹೆಸರು | - ಬಸವರಾಜು ಕೆ.ವಿ. |
| ವಯಸ್ಸು | - **45** |
| ಉದ್ಯೋಗ | - ಗೃಹಿಣಿ |
| ವಿಳಾಸ | - ಕಬ್ಬಾಳು ಗ್ರಾಮ |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಪರಿಚಯ. ಅವರು ನನಗೆ ಸಂಬಂಧಿಕರು. ಚಾಸಾ-**2** ನನ್ನ ಮಗ, ಚಾ.ಸಾ. **3** ನನ್ನ ಗಂಡ , ಚಾ.ಸಾ. **4** ರಿಂದ **7** ಗ್ರಾಮಸ್ಥರು.

ಆರೋಪಿತರು ಮತ್ತು ನಮ್ಮ ನಡುವೆ ಗಲಾಟೆ ಆಗಿರುವುದಿಲ್ಲ. ಬಾಯಿ ಮಾತಿನ ಗಲಾಟೆ ವಿಚಾರಕ್ಕೆ ಠಾಣೆಗೆ ಹೋದಾಗ ಪೊಲೀಸರು ಬಿಳಿ ಹಾಳೆಗಳ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿದ್ದರು.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ದೂರು ಎಂದು ಗುರುತಿಸಿದ್ದು, ಸದರಿ **ದೂರನ್ನು** ನಿಪಿ-**1** ಎಂದು, ಸಾಕ್ಷಿ ಸಹಿಯನ್ನು ನಿಪಿ-**1(ಎ)** ಎಂದು ಗುರುತಿಸಲಾಯಿತು.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಪಂಚನಾಮೆ ಎಂದು ಗುರುತಿಸಿದ್ದು, ಸದರಿ

**ಪಂಚನಾಮೆಯನ್ನು** ನಿಪಿ-**2** ಎಂದು, ಸಾಕ್ಷಿ ಸಹಿಯನ್ನು ನಿಪಿ-**2(**ಎ**)** ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನು ವಶಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>

ದಿ. **07.12.2020** ರಂದು ಬೆಳಗ್ಗೆ **7.30** ಗಂಟೆಗೆ ಕಂ ಸಾಗರದಲ್ಲಿರುವ ಸ ನಂ **34/1** ರ ನನ್ನ ಜಮೀನಿನಲ್ಲಿ ಆರೋಪಿತರು ನನಗೆ ಮತ್ತು ಚಾ.ೃಸಾ. **2** ಮತ್ತು **3** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅತಿಕ್ರಮ ಪ್ರವೇಶ ಮಾಡಿ **3** ನೇ ಆರೋಪಿ ದೊಣ್ಣೆಯಿಂದ ನನ್ನ ಕೈಗೆ, ಕೆಳಹೊಟ್ಟೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು **2** ನೇ ಆರೋಪಿ ಚಾ.ಸಾ. **2** ರವರಿಗೆ ತಾನು ತಂದಿದ್ದ ದೊಣ್ಣೆಯಿಂದ ಎಡಮೊಣಕೈಗೆ, ಕುತ್ತಿಗೆಗೆ ಹೊಡೆದು ತರಚಿದ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು **1** ಮತ್ತು **4** ನೇ ಆರೋಪಿತರು ಚಾ.ಸಾ. **3** ರವರಿಗೆ ಕೈಗಳಿಂದ ಹೊಡೆದು ಕೆಳಕ್ಕೆ ಬೀಳಿಸಿ ಕಾಲುಗಳಿಂದ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು ಮತ್ತು ಜಮೀನಿನಿಂದ ಪೈಪುಗಳನ್ನು ಹೊಡೆದು ಹಾಕಿ ನಮಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿ.ಪಿ.**1** ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿ.**17.12.2020** ರಂದು ನನ್ನ ಹಾಗೂ ಚಾಸಾ-**6** ಮತ್ತು **7** ರವರ ಸಮಕ್ಷಮ ಪೊಲೀಸರು ನಿಪಿ- **2** ರ ಪ್ರಕಾರ ಬೆಳಗ್ಗೆ **11** ಗಂಟೆಯಿಂದ **11.35** ಗಂಟೆವರೆಗೆ ಪಂಚನಾಮೆ ಮಾಡಿ ಎರಡು ದೊಣ್ಣೆ ಮತ್ತು ಗೇಟ್ ವಾಲ್ ಅನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

ಆರೋಪಿತರೊಂದಿಗೆ ಯೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **12.10** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**